


ಕಂಪೆನಿಯಿಂದ ಕಂಪೆನಿಗೆ ವಲಸೆ ಹೋಗುವುದು ಸಾಮಾನ್ಯವಾಗಿದ್ದ ಆ ಕಾಲದಲ್ಲಿ ಶೇಷಾಚಾರ್ ಪ್ರಸಿದ್ಧ ಗುಬ್ಬಿ ಕಂಪೆನಿಗೆ ಪ್ರವೇಶ ಪಡೆದರು. ಪ್ರತಿಭಾವಂತ ನಟ–ನಟಿಯರಿದ್ದ ಸಂಸ್ಥೆ ಅದು. ಅಲ್ಲಿ ಶೇಷಾಚಾರ್ ಪ್ರತಿಭಾ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟ ನಾಟಕ 'ಕುರುಕ್ಷೇತ್ರ'. ಕರ್ನಾಟಕ ಮಾತ್ರವಲ್ಲ ಇಡೀ ದಕ್ಷಿಣ ಭಾರತದ ವೃತ್ತಿ ರಂಗಭೂಮಿ ವಲಯಗಳಲ್ಲಿ ಸಂಚಲನ ಮೂಡಿಸಿದ್ದ 'ಕುರುಕ್ಷೇತ್ರ' ಹೊಸ ಬಗೆಯ ರಂಗಸಜ್ಜಿಕೆ. ವಿಶಿಷ್ಟ ಸಂಗೀತ, ಆಕರ್ಷಕ ದೃಶ್ಯಾವಳಿಗಳಿಂದ ಪ್ರೇಕ್ಷಕರನ್ನು ರಂಜಿಸುತ್ತಿದ್ದ ನಾಟಕ. ಅಲ್ಲೂ 'ದುರ್ಯೋಧನ'ನಾಗಿ ಮಿಂಚಿದರು.

'ಪ್ರಭಾಮಣಿ ವಿಜಯ' ನಾಟಕದಲ್ಲಿ ದುರ್ಜಯನಾಗಿ, 'ಅಕ್ಕಮಹಾದೇವಿ' ನಾಟಕದಲ್ಲಿ ಅರವಿಂದನಾಗಿ ಅಭಿನಯಿಸಿ ಶೇಷಚಾರ್ ಒಂದಿಷ್ಟು ಕಾಲ ಸಿನಿಮಾ ಜಗತ್ತಿನ ಸೆಳೆತಕ್ಕೂ ಬಿದ್ದರು. ಮದ್ರಾಸ್‌ನಲ್ಲಿ ಸ್ವಲ್ಪ ನೆಲೆನಿಂತ ಅವರು 'ಭಕ್ತಸುಧಾಮ', 'ಭಕ್ತ ಪ್ರಹ್ಲಾದ' ಚಿತ್ರಗಳಲ್ಲಿ ಅಭಿನಯಿಸಿದ ನಂತರ ರಂಗಭೂಮಿಗೆ ಮರಳಿದರು. ಆಗ ಅವರು ಸೇರಿಕೊಂಡಿದ್ದು ಕೆ. ಹಿರಣ್ಣಯ್ಯನವರ ನಾಟಕ ಸಂಸ್ಥೆಗೆ. 'ಹಿರಣ್ಣಯ್ಯ ಮಿತ್ರ ಮಂಡಲಿ' ಪ್ರದರ್ಶಿಸಿದ ಬಹುತೇಕ ಎಲ್ಲಾ ನಾಟಕಗಳಲ್ಲೂ ಶೇಷಾಚಾರ್ ಪ್ರಮುಖ ಪಾತ್ರಧಾರಿ.

ಆಗಿನ ಎಲ್ಲಾ ನಟರಂತೆ ಶೇಷಾಚಾರ್ ಅವರೂ ಸ್ವಂತ ನಾಟಕ ಕಂಪೆನಿ ಸ್ಥಾಪನೆಗೆ ಮೊದಲಿಟ್ಟರು. ಅದರ ಹೆಸರು 'ಶೇಷ ಕಮಲ ಕಲಾ ಮಂಡಲಿ'. ಬೇರೆ ಬೇರೆ ನಾಟಕ ಸಂಸ್ಥೆಗಳಲ್ಲಿ ನಾಲ್ಕಾರು ಬಗೆಯ ಪಾತ್ರಗಳಲ್ಲಿ ಅಭಿನಯಿಸಿದ್ದ ಅನುಭವಿ ಶೇಷಾಚಾರ್ ಹೊಸತನಕ್ಕೆ ಸದಾ ಹಾತೊರೆಯುತ್ತಿದ್ದರು. ಆಗ ಕನ್ನಡ ವೃತ್ತಿ ರಂಗಭೂಮಿಗೆ ದಕ್ಕಿದ ನಾಟಕವೇ 'ನವೀನ ಕೃಷ್ಣ ಲೀಲೆ'. ಈ ನಾಟಕದಲ್ಲಿ 155 ಪಾತ್ರಗಳನ್ನು ಸೃಷ್ಟಿಸಿದ ಶೇಷಾಚಾರ್ ಕನ್ನಡದ ಹೆಸರಾಂತ ಕಲಾವಿದರನ್ನು ಆ ಪಾತ್ರಗಳಲ್ಲಿ ಕಾಣಿಸಿಕೊಳ್ಳುವಂತೆ ಮಾಡಿದರು.

ಈ ನವೀನ ಮಾದರಿಗೆ ತಕ್ಕಂತೆ ರಂಗ ಸಜ್ಜಿಕೆಯನ್ನು ರೂಪಿಸಿದರು. ಅವರ ನಿರೀಕ್ಷೆ ಸುಳ್ಳಾಗಲಿಲ್ಲ. ಮೊಕ್ಕಾಂ ಹಾಕಿದ ಕಡೆಗಳಲ್ಲಿ 'ನವೀನ ಕೃಷ್ಣ ಲೀಲೆ' ಜಯಭೇರಿ ಬಾರಿಸಿತು. ಕನ್ನಡ ರಂಗಭೂಮಿಯ ಹಲವು ಜನಪ್ರಿಯ ನಾಟಕಗಳನ್ನು ಶೇಷಾಚಾರ್ ಸಂಸ್ಥೆ ಪ್ರದರ್ಶಿಸುತ್ತಿತ್ತು. ಅದರಲ್ಲಿ 'ಸಂಸಾರ ನೌಕೆ', 'ಷಹಜಹಾನ್', 'ಎಚ್ಚಮನಾಯಕ', 'ರಾಮಾಯಣ', 'ಧರ್ಮರತ್ನಾಕರ', 'ರಾಜಾ ಗೋಪಿಚಂದ್' ನಾಟಕಗಳೂ ಸೇರಿದ್ದವು.

ಚಲನಚಿತ್ರ ರಂಗದಲ್ಲಿ ಗುರುತಿಸಿಕೊಂಡ ಹಲವಾರು ನಟ–ನಟಿಯರಿಗೆ ಮೊದಲು ವೇದಿಕೆ ಒದಗಿಸಿದ್ದೇ ಈ ಕಂಪೆನಿ. ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ, ಹುಣಸೂರು ಕೃಷ್ಣಮೂರ್ತಿ, ರಾಜ್‌ಕುಮಾರ್, ಬಾಲಕೃಷ್ಣ, ವರದರಾಜ್, ನರಸಿಂಹರಾಜು, ಜಿ.ವಿ. ಅಯ್ಯರ್ ಮೊದಲಾದವರು ಶೇಷಾಚಾರ್ ನಾಟಕ ಸಂಸ್ಥೆಯಲ್ಲಿ ಸಾಮು ತೆಗೆದ ಕಲಾವಿದರಲ್ಲಿ ಕೆಲವರು.

ವ್ಯವಹಾರ ಕುಶಲತೆ ಇಲ್ಲವಾದ್ದರಿಂದ ಮೊದಲ ಕಂಪೆನಿ ನೆಲಕಚ್ಚಿತು. ಇನ್ನೊಂದನ್ನು ಆರಂಭಿಸುವ ಹುಚ್ಚು ಶೇಷಾಚಾರ್ ಅವರನ್ನು ಬಿಡಲಿಲ್ಲ. ಕಲಾತ್ಮಕ ಚಲನಚಿತ್ರ('ತಬ್ಬಲಿಯು ನೀನಾದೆ ಮಗನೆ' ಮುಂತಾದವು)ಗಳಿಗಾಗಿ ಬಣ್ಣ ಹಚ್ಚಿದ್ದು ಕೂಡ ಅವರ ಕಲೆಯ ಸೆಳೆತದ ವಿಸ್ತರಣೆಯೇ ಆಗಿತ್ತು.